ಅಸಲು ದಾವೆ ಸಂಖ್ಯೆ- 236/2021
ಪಿಡಬ್ಲ್ಯೂ- 01
ದಿನಾಂಕಃ 14.12.2022
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ವಿ ಬಿ ಟಿ ವಕೀಲರಿಂದ

ಸರ್ವೆ ನಂ.15 ರಲ್ಲಿ ಒಟ್ಟು 8 ಹಿಸ್ಸೆಗಳು ಇರುತ್ತವೆ. ಮೊದಲು 6 ಹಿಸ್ಸೆಗಳು ಮಾತ್ರ ಇದ್ದವು ಸರ್ವೆ ನಂ.15 ರ ಪೂರ್ವಕ್ಕೆ ರಸ್ತೆ ಇರುತ್ತದೆ. ರಸ್ತೆಗೆ ಹೊಂದಿಕೊಂಡು ಪಶ್ಚಿಮಕ್ಕೆ ನಮ್ಮದೇ ಸರ್ವೆ ನಂ.15/4 ಇರುತ್ತದೆ. ಸದರಿ ರಸ್ತೆಯು ಸರ್ವೆ ನಂ.15 ರಲ್ಲಿಯೇ ಇರುತ್ತದೆ ಎಂದರೆ ಸರಿಯಲ್ಲ. ಸದರಿ ರಸ್ತೆ ಸರ್ವೆ ನಂ.15 ಹಿಸ್ಸಾ 6 ರಲ್ಲಿ ಇರುತ್ತದೆ. ಸದರಿ ರಸ್ತೆಯ ಪೂರ್ವಕ್ಕೆ ಈರಪ್ಪ ಅಂಗಡಿ ಇವರ ಜಮೀನು ಇರುತ್ತದೆ. ಅದರ ಸರ್ವೆ ನಂ.15/7. ಸರ್ವೆ ನಂ.15/4 ರ ದಕ್ಷಿಣಕ್ಕೆ ಪ್ರತಿವಾದಿಯರ ಜಮೀನು ಇರುತ್ತದೆ. ಪ್ರತಿವಾದಿಯರ ಸರ್ವೆ ನಂ.15/3 ಇರುತ್ತದೆ. ನನ್ನ ಆಸ್ತಿಯ ಪಶ್ಚಿಮಕ್ಕೆ ಸುರೇಶ ಗಾಣಿಗೇರ ಇವರ ಆಸ್ತಿ ಇರುತ್ತದೆ. ಉತ್ತರಕ್ಕೆ ಈರಪ್ಪ ಅಂಗಡಿ ಇವರ ಜಮೀನು ಇರುತ್ತದೆ. ಪ್ರತಿವಾದಿಯರು ದಾವಾ ಆಸ್ತಿಯಲ್ಲಿ 20-30 ವರ್ಷದಿಂದ ಕಬ್ಜೆಯಲ್ಲಿರುತ್ತಾರೆ, ಆದರೆ ನಮಗೆ ಅಳತೆ ಮಾಡಿಸಿದ ನಂತರವೇ ದಾವಾ ಆಸ್ತಿ ನಮಗೆ ಬರುತ್ತದೆ ಅಂತಾ ಗೊತ್ತಾಗಿರುತ್ತದೆ, ಅಲ್ಲಿಯವರೆಗೆ ನಮಗೆ ಗೊತ್ತಿರಲಿಲ್ಲ. ದಾವಾ ಆಸ್ತಿ 6 ಗುಂಟೆ ಇರುತ್ತದೆ. ದಾವಾ ಆಸ್ತಿ ಈ ದಾವೆ ಹೂಡುವ ಸಮಯದಲ್ಲಿ 15 ಲಕ್ಷ ರೂಪಾಯಿ ಕಿಮ್ಮತ್ತು ಆಗುತ್ತಿತ್ತು. ದಿನಾಂಕಃ 15.12.2016 ರಂದು ದಾವಾ ಆಸ್ತಿಯನ್ನು ಅಳತೆ ಮಾಡಿಸಿರುತ್ತೇವೆ. ದಾವಾ ಆಸ್ತಿ ಪ್ರತಿವಾದಿಯರ ಸರ್ವೆ ನಂಬರಿನ ಒಂದು ಭಾಗ ಎನ್ನುವುದು ಸರಿಯಲ್ಲ. ಸದರಿ ದಾವಾ ಆಸ್ತಿಯು ಪ್ರತಿವಾದಿಯರ ಆಸ್ತಿ ಆಗಿರುತ್ತದೆ, ನನಗೆ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.15 ರಲ್ಲಿಯ 8 ಹಿಸ್ಸಾಗಳನ್ನು ಅಳತೆ ಮಾಡಿಲ್ಲ ಎಂದರೆ ಸರಿಯಲ್ಲ, ಅಳತೆ ಮಾಡಿರುತ್ತಾರೆ. ಸದರಿ ನಮ್ಮ 6 ಗುಂಟೆ ಆಸ್ತಿ ರಸ್ತೆಯಲ್ಲಿ ಹೋಗಿರುತ್ತದೆ ಎಂದರೆ ಸರಿಯಲ್ಲ. ಅಳತೆ ಮಾಡುವಾಗ ಪ್ರತಿವಾದಿಯರಿಗೆ ನೋಟಿಸು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಕ್ರಮಬದ್ಧವವಾಗಿ ಅಳತೆ ಮಾಡಿಲ್ಲ ಎಂದರೆ ಸರಿಯಲ್ಲ ಪ್ರತಿವಾದಿಯ ಆ್ತ ತೆಗೆದುಕೊಳ್ಳಬೇಕು ಅಂತಾ ಸುಳ್ಳು ದಾವೆ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು.ಸವಣೂರು.